# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 297

**26 ಅಕ್ಟೋಬರ್ 2026 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ವಯೊಲಿನ್ ವಾದನ**



ವಿದ್ವಾನ್ ಅಂಬಿ ಸುಬ್ರಹ್ಮಣ್ಯಂ



ವಿದ್ವಾನ್ ಕೆ.ಯು. ಜಯಚಂದ್ರರಾವ್

ಮೃದಂಗ



ವಿದ್ವಾನ್ ರಾಜಶೇಖರ್ ಭೀಮಾಚಾರ್

ಮೋರ್ಸಿಂಗ್

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಅಂಬಿ ಸುಬ್ರಹ್ಮಣ್ಯಂರವರು** ಖ್ಯಾತ ಅಂತಾರಾಷ್ಟ್ರೀಯ ವಯೊಲಿನ್ ಕಲಾವಿದರು. ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ತಂದೆ ಅಂತಾರಾಷ್ಟ್ರೀಯ ಖ್ಯಾತಿಯ ವಯೊಲಿನ್ ಮಾಂತ್ರಿಕ ಡಾ. ಎಲ್. ಸುಬ್ರಹ್ಮಣ್ಯಂರವರು. ಪ್ರಾಥಮಿಕ ಶಿಕ್ಷಣವನ್ನು ತಂದೆಯಿಂದ ಪಡೆದರು. ಏಳನೆಯ ವರ್ಷಕ್ಕೇ ಸಾರ್ವಜನಿಕ ಕಚೇರಿ ನೀಡಿದರು. ಜಗತ್ತಿನಾದ್ಯಂತ ವಾದನಸಾಮರ್ಥ್ಯವನ್ನು ಪ್ರಸ್ತುತಿ ಪಡಿಸುತ್ತಿರುವವರು. 2021ನೇ ಸಾಲಿನ ಅತ್ಯಂತ ಪ್ರತಿಭಾವಂತ 25 ಜನ ಯುವ ಭಾರತೀಯರ ಪಟ್ಟಿಯಲ್ಲಿ ಇವರ ಹೆಸರಿರುವುದು ಹೆಮ್ಮೆಯ ವಿಷಯ. ಸಹೋದರಿ ಶ್ರೀಮತಿ ಬಿಂದುರವರ ಸಹಕಾರದಲ್ಲಿ ರೂಪುಗೊಂಡಿರುವ 'ಸಾಪಾ' ಸಂಸ್ಥೆಯ ಮೂಲಕ ವಿವಿಧ ದೇಶಗಳ 40,000ಕ್ಕೂ ಹೆಚ್ಚು ಮಕ್ಕಳಿಗೆ ಸಂಗೀತ ಕಲಿಸುತ್ತಿರುವುದು ಇವರ ಹೆಗ್ಗಳಿಕೆ. ಕರ್ನಾಟಕ ವಯೊಲಿನ್‌ಗೆ ಸಂಬಂಧಿಸಿದ ಸುಮಾರು 30 ಗ್ರಂಥಗಳ ಸಹಲೇಖಕರಾಗಿದ್ದಾರೆ. ವಿಶ್ವಸಂಸ್ಥೆಯ ಚಿನ್ಮಯ ಧ್ಯಾನಸಂಕುಲದಲ್ಲಿ ಯುವ ಪ್ರತಿನಿಧಿಗಳಾಗಿ ಪಾಲ್ಗೊಂಡಿರುವುದು ಇವರ ವಿದ್ವತ್ತಿಗೆ ದೊರೆತ ಗೌರವ. ಸಂಗೀತದ ಜೊತೆಗೆ ಶಾಲಾ ಶಿಕ್ಷಣದಲ್ಲೂ ಇವರ ಸಾಧನೆ ಅತ್ಯಂತ ಗಮನಾರ್ಹ. ಜಾಗತಿಕ ವೀಣಾವಾದನ ತಂತ್ರಗಳಲ್ಲಿ ಪಿಎಚ್.ಡಿ., ಸಂಗೀತದಲ್ಲಿ ಎಂಫಿಲ್, ಎಂಬಿಎ (ಫೈನಾನ್ಸ್) ಮತ್ತು ಟ್ರಿನಿಟಿ ಕಾಲೇಜ್ ಆಫ್ ಮ್ಯೂಸಿಕ್‌ನಿಂದ ಪಾಶ್ಚಾತ್ಯ ವಯೊಲಿನ್ ವಾದನದಲ್ಲಿ ಎಲ್‌ಟಿಸಿಎಲ್ ಪ್ರಮಾಣಪತ್ರ ಪಡೆದಿರುವ ಅಪರೂಪದ ಸಾಧನೆ. ವಿನಯಶೀಲರು, ಮಿತಭಾಷಿಗಳು. ಇವರ ಮಾತುಗಳು, ಭಾವನೆಗಳೆಲ್ಲವನ್ನೂ ಅವರ ವಯೊಲಿನ್ ವಾದನವೇ ಸಹೃದಯರಿಗೆ ಸಮರ್ಥವಾಗಿ ತಲುಪಿಸುತ್ತದೆ.

**ವಿದ್ವಾನ್ ಕೆ.ಯು. ಜಯಚಂದ್ರರಾವ್‌ರವರು** ಶ್ರೇಷ್ಠ ಮೃದಂಗ ವಿದ್ವಾಂಸರು. ತಂದೆ ಪ್ರೊ. ಕೆ. ರಾಘವೇಂದ್ರರಾವ್ ಖ್ಯಾತ ಕೊಳಲು ವಾದಕರು. ತಾಯಿ ಶ್ರೀಮತಿ ಕೆ.ಆರ್. ಪ್ರೇಮಾರಾವ್ ವಯೊಲಿನ್ ವಾದಕರು. ಇಂಥ ಸಂಗೀತ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದ ಇವರು ಭಾರತೀಯ ಲಯವಾದ್ಯ ಪ್ರಪಂಚದ ಮೇರು ಪ್ರತಿಭೆಯಾದದ್ದು ಅಚ್ಚರಿಯೇನಲ್ಲ.

ಇವರ ಪತ್ನಿ ಶ್ರೀಮತಿ ಕಾಂಚನ ಎಸ್. ಶ್ರೀರಂಜನಿಯವರು ಕರ್ನಾಟಕ ಸಂಗೀತದ ಪ್ರಸಿದ್ಧ ಕಲಾವಿದರು. ಅನೇಕ ಅಂತಾರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಭಾಗವಹಿಸಿ ಇಪ್ಪತ್ತಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು. ಕಾಂಚನ ಶ್ರೀ ಲಕ್ಷ್ಮೀನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್ ಸಂಸ್ಥೆಯನ್ನು ಕ್ರಿಯಾಶೀಲರಾಗಿ ಮುನ್ನಡೆಸುತ್ತಿದ್ದಾರೆ.

**ವಿದ್ವಾನ್ ಬಿ. ರಾಜಶೇಖರ್ ಭೀಮಾಚಾರ್‌ರವರು** ಮೋರ್ಸಿಂಗ್‌ನಂಥ ಅತ್ಯಂತ ಚಿಕ್ಕ ವಾದ್ಯದ ಮೂಲಕ ಸಭೆಯಲ್ಲಿ ವಿದ್ಯುತ್ಸಂಚಾರ ಮಾಡುವಂಥ ಮೋಡಿಗಾರ ಕಲಾವಿದರು. ಬೆಂಗಳೂರಿನವರಾದ ಇವರು ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ತಂದೆ ಹಿರಿಯ ಮೋರ್ಸಿಂಗ್ ಕಲಾವಿದರಾದ ವಿದ್ವಾನ್ ಎಲ್. ಭೀಮಾಚಾರ್‌ರವರು. ಅವರಿಂದ ಸಂಪ್ರದಾಯಬದ್ಧವಾಗಿ ಮೋರ್ಸಿಂಗ್ ವಾದನವನ್ನು ಕಲಿತರು. ಭಾರತ ಸರ್ಕಾರದ ಶಿಷ್ಯವೇತನವನ್ನು ಪಡೆದ ಇವರು ಆಕಾಶವಾಣಿಯ ಟಾಪ್ ಗ್ರೇಡ್ ಕಲಾವಿದರಾಗಿದ್ದಾರೆ. ಹಲವಾರು ರೇಡಿಯೋ ಮತ್ತು ದೂರದರ್ಶನ ವಾಹಿನಿಗಳಲ್ಲಿ ಕಾರ್ಯಕ್ರಮ ನೀಡಿ ಸಂಗೀತಾಸಕ್ತರಿಗೆ ಚಿರಪರಿಚಿತರಾಗಿದ್ದಾರೆ. 1980ರಿಂದ ಮೋರ್ಸಿಂಗ್ ನುಡಿಸುತ್ತಿರುವವರು. ಹಲವಾರು ಬಹುಮಾನಗಳಿಗೆ ಭಾಜನರಾಗಿದ್ದು, ಅವುಗಳಲ್ಲಿ ಕರ್ನಾಟಕ ಸಂಗೀತ ಅಕಾಡೆಮಿಯು 1985 ಮತ್ತು 1987ರಲ್ಲಿ ನೀಡಿದ ಬಹುಮಾನಗಳು ಉಲ್ಲೇಖನೀಯ. ಬೆಂಗಳೂರಿನ ಗಾಯನ ಸಮಾಜವು ಇವರಿಗೆ 'ಅತ್ಯುತ್ತಮ ಪಕ್ಕವಾದ್ಯಗಾರರು' ಪ್ರಶಸ್ತಿ ನೀಡಿದೆ. 2022ರಲ್ಲಿ ಇವರಿಗೆ 'ಜಾಗತಿಕ ಮೋರ್ಸಿಂಗ್ ಪ್ರವೀಣ' ಪ್ರಶಸ್ತಿ ಬಂದಿದೆ.

# ಬೆಳದಿಂಗಳ ಸಂಗೀತ 298

**24 ನವೆಂಬರ್ 2026**

**ವೀಣೆ**

**ವಿದುಷಿ ಎಸ್.ವಿ. ಸಹನ**

**ಮೃದಂಗ**

**ವಿದ್ವಾನ್ ಕಿಶೋರ್ ರಮೇಶ್**

**ಘಟಂ**

**ವಿದ್ವಾನ್ ಜಿ.ಎಸ್. ರಾಮಾನುಜಂ**

ಫೋನ್: 0821–2548221, 2548223 * ಇಮೇಲ್: sutturmath@jssonline.org